ನಾನು ಕವಿಗಳ ಬಗ್ಗೆ ಯೋಚಿಸುತ್ತೇನೆ ಉದಾ: ಕಾಲರಿಜ್ ಒಂದು ಪತ್ರದ ಮೂಲಕ
ಸುರುಮಾಡುತ್ತಾನೆ ತನ್ನ ಭಾವನೆಗಳ ಪ್ರಕಟಿಸುವುದಕ್ಕೆ ಮತ್ತೆ ಅದನ್ನೇ ತಿದ್ದಿ ತೀಡಿ
ಗಾಢ ಪ್ರಗಾಢವನ್ನಾಗಿ ಮಾಡುತ್ತಾನೆ
ವೈಯಕ್ತಿಕವಾದ್ದನ್ನು ಯುನಿವರ್ಸಲ್ ಮಾಡುವ ಆತುರ ಕವಿಗಳಿಗೆ ಮೊದಲು
ಸಾರಾ (ಸಾರಾ ಹಚಿನ್ಸನ್) ಎಂದು ಕರೆದವನು ಆಮೇಲೆ ಓ ಲೇಡಿ ಎನ್ನುತ್ತಾನೆ
ತನ್ನ ವೈಯಕ್ತಿಕ ಅಳಲನ್ನು ವಿಶ್ವಾತ್ಮಕ ಆಕ್ರಂದನವಾಗಿ ಮಾಡುತ್ತಾನೆ ಓದುವ
ಮಂದಿ ಹೇಗೆ ಅರ್ಥಮಾಡಿಕೊಳ್ಳಬೇಕು – ತಮ್ಮದೇ ಅನುಭವದಲ್ಲಿ ಅಲ್ಲದೆ? ಕವಿತೆ
ಎಷ್ಟು ಪ್ರಕಟಿಸುತ್ತದೋ ಅದಕ್ಕಿಂತ ಹೆಚ್ಚನ್ನು ಮುಚ್ಚಿಡುತ್ತದೆಯೆ ಭಾಷೆಯ
ಜಾಯಮಾನವೆ ಹಾಗೆಯೆ ಇನ್ನು ಕವಿತೆಯದೇನು

ಯಾಕೀಗ ನನ್ನ ಮಾತುಗಳೂ ಅಸ್ಪಷ್ಟವಾಗುತ್ತಿವೆ ನಾನು ಹೇಳಬಯಸುವುದಾದರೂ
ಏನನ್ನು ಬಹುಶಃ ಈ ನಿರುದ್ವೇಗದ ಉದ್ವೇಗವನ್ನು ಈ ನೆರಳ ಹಿಂದಿನ ಮೋಡವನ್ನು
ನನ್ನ ಮನಸ್ಸನ್ನು ಬಾಧಿಸುವ ಖಿನ್ನತೆಯೇನು? ಅಕ್ಷರದ ಕ್ಷರವೆ ಕವಿತೆಯ ಅಸಾಧ್ಯತೆಯೆ
ನನ್ನ ದೃಷ್ಟಿಯೂ ಈಗ ಮಂಕಾಗಿದೆ
ಆಹಾ ಕಾಲರಿಜ್! ಖಿನ್ನತೆಯ ಮರೆಸಲೆಂದೇ ನೀನು ಕವಿತೆಯ ಮರೆಹೋದಿ
ಅದಕ್ಕೊಂದು ಪ್ರಗಾಢದ ರೂಹು ಕೊಟ್ಟೆ ಆದರೂ ಸಿಗದವಳ ಮೋಹದಲಿ ತಲ್ಲಣಿಸಿದಿ
ಆಮೇಲೆ ಅವಳ ಬಿಟ್ಟು ಅಫೀಮಿಗೆ ಶರಣಾದಿ ದೇವರು ನೋಡುತ್ತಾನೆ ಎಲ್ಲವನ್ನೂ
ಮನುಷ್ಯರು ನೋಡುವಂತೆ ಇರುವೆಗಳನ್ನು ಆದರೆ ಏನೂ ಮಾಡುವುದಿಲ್ಲ



## 2

ಈಗ ಕಾಲರಿಜ್ ಇಲ್ಲ ವರ್ಡ್ಸ್‌ವರ್ತ್ ಇಲ್ಲ ಡೊರೊಥಿ ಇಲ್ಲ ಸಾರಾ ಇಲ್ಲ
(ಎಷ್ಟೊಂದು ಮಂದಿ ಸಾರಾ ಇದ್ದರು!) ಎಷ್ಟೊಂದು ದುಃಖದ ವಿಷಯ ನನಗೆ ನಾನು
ಇಷ್ಟೊಂದು ಹಚ್ಚಿಕೊಂಡವರು ಯಾರೂ ಈಗ ಇಲ್ಲವೆಂದರೆ
ಅವರು ಬಿಚ್ಚಿಟ್ಟ ಸೌಂದರ್ಯ ನೋಡಿದಂತೆಯೆ ನಾನು ಅವರು ಮುಚ್ಚಿಟ್ಟ
ಸಂಕಟಗಳನ್ನೂ ನೊಡಿದೆ ಬಹುಶಃ ನೋಡಬಾರದಿತ್ತೇನೊ ಅವರು ಅವರಷ್ಟಕ್ಕೆ ಇದ್ದರು
ಕಣಿವೆ ಬೆಟ್ಟ ಬಯಲುಗಳಲ್ಲಿ ಅಡ್ಡಾಡಿಕೊಂಡಿದ್ದರು ಭಿಕ್ಷುಕರ ನಡುವೆ ಓಡಾಡಿಕೊಂಡಿದ್ದರು
ನಾನೂ ಇದ್ದೆ ಅವರ ನೆರಳಾಗಿ ಬಹುಶಃ ಇರಬಾರದಿತ್ತೇನೊ
ಈಗ ವಿಹ್ವಲನಾಗಿದ್ದೇನೆ ಅವರಿಲ್ಲದ ಕಣಿವೆ ಕಣಿವೆಯೇ ಅಲ್ಲ ಅವರಿಲ್ಲದ ಬೆಟ್ಟ
ಬಯಲು ಒಂದೂ ಮೊದಲಿನಂತಿಲ್ಲ
ಭಣಭಣಿಸುತ್ತಿದೆ ಇಡೀ ಭೂವಲಯ ಮಂತ್ರ ಮರೆತ
ಗುಹೆ 'ಸಾಸಿವೆ ಸಾಸಿವೆ ಬಾಗಿಲು ತೆರಿ ಸಾಸಿವೆ' ಎಂದರೆ ತೆರೆಯುವುದೆ
ಗುಮ್ಮನ ಹಾಗೆ ಸುಮ್ಮನಾಗಿದೆ